

## ಅನೀಶ್ ಮತ್ತೊಂದು ಹೆಜ್ಜೆ

2010ರಲ್ಲಿ ಬಿಡುಗಡೆಯಾದ ‘ನಮ್ ಏರಿಯಾದಲ್ ಒಂದಿನ’ ಸಿನಿಮಾದ ಮೂಲಕ ಚಿತ್ರರಂಗ ಪ್ರವೇಶಿಸಿದಾಗ ಇನ್ನೂ ಚಿಗುರು ಮೀಸೆಯ ಹುಡುಗ ಅನೀಶ್. ಆದರೆ ಕಳೆದ ಒಂಬತ್ತು ವರ್ಷದಲ್ಲಿ ಅವರ ಮೀಸೆ ಇನ್ನಷ್ಟು ಹುರಿಗೊಂಡಿದೆ. ಮುಖ ಗಡಸು ಗೊಂಡಿದೆ. ಮೈ ಹುರಿಗಟ್ಟಿದೆ. ಅವರು ನಟಿಸಿರುವ ಎಂಟು ಸಿನಿಮಾಗಳು ಬಿಡುಗಡೆಯಾಗಿವೆ. ಆದರೆ ಗೆಲುವಿನ ಗೆಳತಿ ಮಾತ್ರ ಅವರ ಸಹವಾಸಕ್ಕೆ ಸಿಕ್ಕಿಲ್ಲ. ಹಾಗಂತ ಅನೀಶ್ ತಮ್ಮ ಪ್ರಯತ್ನ ಬಿಟ್ಟಿಲ್ಲ. ಕಳೆದ ವರ್ಷ ಬಿಡುಗಡೆಯಾದ ‘ವಾಸು ನಾನ್ ಪಕ್ಕಾ ಕಮರ್ಷಿಯಲ್’ ಸಿನಿಮಾದಲ್ಲಿ ನಟನೆಯ ಹೊಣೆಯೊಟ್ಟಿಗೆ ನಿರ್ಮಾಣದ ಹೊರೆಯನ್ನೂ ಹೊತ್ತರು. ‘ಇದು ನನ್ನ ಮಟ್ಟಿಗೆ ಮಾಡು ಇಲ್ಲವೇ ಮಡಿ ಸಿನಿಮಾ’ ಎಂದೇ ಹೇಳಿಕೊಂಡಿದ್ದ ಅವರಿಗೆ ವಾಸುವೂ ಕಮರ್ಷಿಯಲ್ ಗೆಲುವು ಗಳಿಸಿಕೊಡಲಿಲ್ಲ. ಈಗ ಅನೀಶ್ ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಿದ್ದಾರೆ. ನಟನೆ, ನಿರ್ಮಾಣದ ಜೊತೆ ಜೊತೆಗೆ ನಿರ್ದೇಶಕನ ಕ್ಯಾಪ್ ಅನ್ನೂ ತಮ್ಮ ತಲೆ ಮೇಲೇರಿಸಿಕೊಂಡಿದ್ದಾರೆ. ‘ರಾಮಾರ್ಜುನ’ ಅನೀಶ್ ನಟಿಸಿ, ನಿರ್ಮಾಣ ಮಾಡಿ, ನಿರ್ದೇಶಿಸುತ್ತಿರುವ ಸಿನಿಮಾ. ನಿಶ್ವಿಕಾ ನಾಯ್ಡು ಈ ಚಿತ್ರದ ನಾಯಕಿ.

ಆಗಸ್ಟ್ 15ರಂದು ತಮ್ಮ ನಿರ್ದೇಶನದ ಮೊದಲ ಸಿನಿಮಾದ ಟೀಸರ್ ಅನ್ನು ಅವರು ಬಿಡುಗಡೆ ಮಾಡಿದ್ದಾರೆ. ಕಾಮಿಡಿ ಕಚಗುಳಿ ಮತ್ತು ಜಬರ್ದಸ್ತ್ ಆ್ಯಕ್ಷನ್ ಎರಡೂ ಇರಿಸಿಕೊಂಡು ಜನರಿಗೆ ರಂಜನೆಯ ರಸಗುಳಿಗೆ ಉಣಿಸಲು ಹೊರಟಿಸುವುದು ಅವರ ಟೀಸರ್‌ನಲ್ಲೇ ತಿಳಿಯುತ್ತದೆ. ‘ಆ್ಯಕ್ಷನ್ ಹೀರೊ’ ಆಗಿ ಮಿಂಚಬೇಕು ಎಂಬ ಅನೀಶ್ ಆಸೆ ‘ರಾಮಾರ್ಜುನ’ದಲ್ಲಾದರೂ ಈಡೇರುವುದೋ ಕಾದು ನೋಡಬೇಕು.

ಚಿತ್ರ: ಕೆ.ಎನ್. ನಾಗೇಶ್‌ಕುಮಾರ್

# ಕಿಚ್ಚಿನ ಮಾತು ಮರೆತರೇ ಕಿಚ್ಚ?



ಅದು 2014. ಸೆಂಟ್ರಲ್ ಕಾಲೇಜು ಮೈದಾನದಲ್ಲಿ ಡಬ್ಬಿಂಗ್ ವಿರೋಧಿ ಸಮಾವೇಶ ನಡೆದಿತ್ತು. ಕನ್ನಡದ ಘಟಾನುಘಟಿ ನಟರೆಲ್ಲರೂ ಅಂದು ವೇದಿಕೆಯಲ್ಲಿದ್ದರು. ಮಾತಿಗೆ ನಿಂತ ಕಿಚ್ಚ ಸುದೀಪ್ ಅವರ ಮೊದಲ ಮಾತೇ, ‘ಇಂದು ಲಕ್ಷ ಲಕ್ಷ ಜನರನ್ನು ನಿರೀಕ್ಷಿಸಿದ್ದೆ. ಇಷ್ಟು ಕಮ್ಮಿ ಜನ ಬಂದಿದ್ದಾರೆ’ ಎಂದು. ಆಕ್ಷೇಪವನ್ನು ವ್ಯಕ್ತಪಡಿಸಿ ಮರುಕ್ಷಣವೇ ಅವರು ವೇದಿಕೆಯಿಂದ ಇಳಿದು ಹೋಗಿದ್ದರು. ಅವರ ವರ್ತನೆಯನ್ನು ಶಿವರಾಜ್‌ಕುಮಾರ್ ಅದೇ ವೇದಿಕೆಯ ಮೇಲೆ ತರಾಟೆಗೆ ತೆಗೆದುಕೊಂಡಿದ್ದರು.

ನಂತರ ತಮ್ಮ ಮಾತಿಗೆ ಸ್ಪಷ್ಟೀಕರಣ ಕೊಟ್ಟ ಸುದೀಪ್, ‘ಕನ್ನಡ ಹೋರಾಟಕ್ಕೆ ಹೆಚ್ಚು ಜನ ಬರಬೇಕು. ಈ ಮೂಲಕ ನಾವು ಡಬ್ಬಿಂಗ್ ವಿರೋಧಿ ಹೋರಾಟದಲ್ಲಿ ಶಕ್ತಿ ಇದೆ ಎಂದು ತೋರಿಸಿಕೊಡಬೇಕು. ಕನ್ನಡದ ಅನ್ನ ತಿನ್ನುತ್ತಿದ್ದೇವೆ. ಕನ್ನಡ ಭಾಷೆಗೆ ಕುತ್ತು ಬಂದಾಗ ವೈಯಕ್ತಿಕ ಕಾರಣಗಳನ್ನು ಬದಿಗಿಟ್ಟು ಹೋರಾಟದಲ್ಲಿ ಪಾಲ್ಗೊಳ್ಳಬೇಕು’ ಎಂದು ಹೇಳಿದ್ದರು.

ಇವೆಲ್ಲವೂ ಈಗ ಇತಿಹಾಸ. ಡಬ್ಬಿಂಗ್ ಹೋರಾಟಕ್ಕೆ ನ್ಯಾಯಾಲಯ ಕೊನೆಯ ಮೊಳೆ ಹೊಡೆದು ಆಗಿದೆ. ಇತಿಹಾಸವನ್ನು ವರ್ತಮಾನ ಹೇಗೆಲ್ಲ ವ್ಯಂಗ್ಯವಾಡುತ್ತದೆ ಎನ್ನುವುದಕ್ಕೆ ಉದಾಹರಣೆಯೋ ಎಂಬಂತೆ, ತೆಲುಗಿನ ‘ಸೈರಾ ನರಸಿಂಹರೆಡ್ಡಿ’ ಮತ್ತು ಹಿಂದಿಯ ‘ದಬಾಂಗ್ 3’ ಸಿನಿಮಾಗಳು ಕನ್ನಡದಲ್ಲಿ ಡಬ್ ಆಗಿ ಬಿಡುಗಡೆಯಾಗುತ್ತಿವೆ; ಈ ಎರಡೂ ಚಿತ್ರಗಳಲ್ಲಿಯೂ ಸುದೀಪ್ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ!

ಸುದೀಪ್ ಕಾಲಕ್ಕೆ ತಕ್ಕ ಹಾಗೆ ತಮ್ಮ ಇಮೇಜನ್ನೂ, ನಿಲುವನ್ನೂ ಬದಲಾಯಿಸಿಕೊಳ್ಳುವುದರಲ್ಲಿ ಸಿದ್ಧಹಸ್ತರು ಎನ್ನುವುದು ಅವರನ್ನು ಹತ್ತಿರದಿಂದ ಬಲ್ಲವರಿಗೆಲ್ಲ ಗೊತ್ತೇ ಇದೆ. ‘ಕನ್ನಡದ ಅನ್ನ ತಿಂದು ಬೆಳೆದಿದ್ದೇವೆ’ ಎನ್ನುವ ಅವರೇ ಆಡಿದ ಮಾತು ಅವರಿಗೆ ನೆನಪಿರಲಿಕ್ಕಿಲ್ಲ. ಯಾಕೆಂದರೆ ಕನ್ನಡ ಅನ್ನದೊಟ್ಟಿಗೆ ಅವರ ಹೊಟ್ಟೆಗೆ ತೆಲುಗು, ತಮಿಳು, ಹಿಂದಿ ಅಷ್ಟೇ ಏಕೆ ಇಂಗ್ಲಿಷ್‌ನ ದುಬಾರಿ ರೆಸಿಪಿಗಳು ಸೇರಿವೆ. ಬೇರೆ ಬೇರೆ ರುಚಿಗಳನ್ನು ಸವಿದ ಅವರ ನಾಲಿಗೆ ತಮ್ಮ ಮೈಗೆ ಕಸುವು ತುಂಬಿದ್ದು, ಕಟ್ಟುಮಸ್ತಾಗಿ ಬೆಳೆಸಿದ್ದು ಮನೆಯೂಟ ಎನ್ನುವುದನ್ನು ಮರೆತಿರಲಿಕ್ಕೂ ಸಾಕು. ಜಾಣಮರೆವಿನ ವರವನ್ನು ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಳ್ಳುವ ಕಲೆಯೂ ಅವರಿಗೆ ಹೊಸತಲ್ಲ.

ಆದರೆ ಯಾರು ‘ಡಬ್ಬಿಂಗ್ ಕನ್ನಡ ವಿರೋಧಿ. ಹಾಗಾಗಿ ಅದರ ವಿರುದ್ಧ ಹೋರಾಟಕ್ಕೆ ಎಂದಿಗೂ ಸಿದ್ಧ’ ಎಂದು ಬೇಲಿಯಾಗಿ ನಿಂತಿದ್ದವರೇ, ತಿರುಗಿ ನಿಂತು, ಇದಕ್ಕಾಗಿಯೇ ಕಾಯುತ್ತಿದ್ದರೇನೋ ಎನ್ನುವ ಹಾಗೆ ಊರ ದನಗಳನ್ನೆಲ್ಲ ಕರೆತಂದು ಹೊಲ ಮೇಯತೊಡಗಿದ ವಿಪರ್ಯಾಸಕ್ಕೆ ಏನೆನ್ನಬೇಕೋ ಆ ಕನ್ನಡಮ್ಮನೇ ಹೇಳಬೇಕು.